ಶ್ರೀ ಗಣೇಶ ಶಾರದ ಗುರುಭ್ಯೋ ನಮಃ

# ಸರೋವರ ಕ್ಷೇತ್ರ - ಅನಂತಪುರ ದರ್ಶನ



## ಗಜೇಂದ್ರ ಮೋಕ್ಷಃ

ಶ್ರೀ ಗಜೇಂದ್ರ ಉವಾಚ –

ಓಂ ನಮೋ ಭಗವತೇ ತಸ್ಮೈ ಯತ ಏತಚ್ಚಿದಾತ್ಮಕಮ್ ।

ಪುರುಷಾಯಾದಿಬೀಜಾಯ ಪರೇಶಾಯಾಭಿಧೀಮಹಿ ॥

ಯಸ್ಮಿನ್ನಿದಂ ಯತಶ್ಚೇದಂ ಯೇನೇದಂ ಯ ಇದಂ ಸ್ವಯಮ್ ।

ಯೋಽಸ್ಮಾತ್ಪರಸ್ಮಾಚ್ಚ ಪರಸ್ತಂ ಪ್ರಪದ್ಯೇ ಸ್ವಯಂಭುವಮ್ ॥

ಯಃ ಸ್ವಾತ್ಮನೀದಂ ನಿಜಮಾಯಯಾರ್ಪಿತಂ ಕ್ವಚಿದ್ವಿಭಾತಂ ಕ್ವ ಚ ತತ್ತಿರೋಹಿತಮ್ ।

ಅವಿದ್ಧದೃಕ್ಸಾಕ್ಷ್ಯುಭಯಂ ತದೀಕ್ಷತೇ ಸ ಆತ್ಮಮೂಲೋಽವತು ಮಾಂ ಪರಾತ್ಪರಃ ॥

ಕಾಲೇನ ಪಂಚತ್ವಮಿತೇಷು ಕೃತ್ಸ್ನಶೋ ಲೋಕೇಷು ಪಾಲೇಷು ಚ ಸರ್ವಹೇತುಷು ।
ತಮಸ್ತದಾಸೀದ್ಗಹನಂ ಗಭೀರಂ ಯಸ್ತಸ್ಯ ಪಾರೇಭಿವಿರಾಜತೇ ವಿಭುಃ ॥
ನಯಸ್ಯದೇವಾ ಋಷಯಃ ಪದಂ ವಿದುರ್ಜಂತುಃ ಪುನಃ ಕೋರ್ಹತಿಗಂತುಮೀರಿತುಮ್ ।
ಯಥಾ ನಟಸ್ಯಾಕೃತಿಭಿರ್ವಿಚೇಷ್ಟತೋ ದುರತ್ಯಯಾನುಕ್ರಮಣಃ ಸ ಮಾವತು ॥
ದಿದೃಕ್ಷವೋ ಯಸ್ಯ ಪದಂ ಸುಮಂಗಲಂ ವಿಮುಕ್ತಸಂಗಾ ಮುನಯಃ ಸುಸಾಧವಃ ।
ಚರಂತ್ಯಲೋಕವ್ರತಮವ್ರಣಂ ವನೇ ಭೂತಾತ್ಮಭೂತಾಃ ಸುಹೃದಃ ಸ ಮೇ ಗತಿಃ ॥
ನ ವಿದ್ಯತೇ ಯಸ್ಯ ಚ ಜನ್ಮ ಕರ್ಮ ವಾ ನ ನಾಮರೂಪೇ ಗುಣದೋಷ ಏವ ವಾ ।
ತಥಾಪಿ ಲೋಕಾತ್ಯಯಸಂಭವಾಯ ಯಃ ಸ್ವಮಾಯಯಾ ತಾನ್ಯನುಕಾಲಮೃಚ್ಛತಿ ॥
ತಸ್ಮೈ ನಮಃ ಪರೇಶಾಯ ಬ್ರಹ್ಮಣೇನಂತಶಕ್ತಯೇ ।
ಅರೂಪಾಯೋರುರೂಪಾಯ ನಮ ಆಶ್ಚರ್ಯಕರ್ಮಣೇ ॥
ನಮ ಆತ್ಮಪ್ರದೀಪಾಯ ಸಾಕ್ಷಿಣೇ ಪರಮಾತ್ಮನೇ ।
ನಮೋ ಗಿರಾಂ ವಿದೂರಾಯ ಮನಸಶ್ಚೇತಸಾಮಪಿ ॥
ಸತ್ವೇನ ಪ್ರತಿಲಭ್ಯಾಯ ನೈಷ್ಕರ್ಮ್ಯೇಣ ವಿಪಶ್ಚಿತಾ ।
ನಮಃ ಕೈವಲ್ಯನಾಥಾಯ ನಿರ್ವಾಣಸುಖಸಂವಿದೇ ॥
ನಮಃ ಶಾಂತಾಯ ಘೋರಾಯ ಗೂಢಾಯ ಗುಣಧರ್ಮಿಣೇ ।
ನಿರ್ವಿಶೇಷಾಯ ಸೌಮ್ಯಾಯ ನಮೋ ಜ್ಞಾನಘನಾಯ ಚ ॥
ಕ್ಷೇತ್ರಜ್ಞಾಯ ನಮಸ್ತುಭ್ಯಂ ಸರ್ವಾಧ್ಯಕ್ಷಾಯ ಸಾಕ್ಷಿಣೇ ।
ಪುರುಷಾಯಾತ್ಮಮೂಲಾಯ ಮೂಲಪ್ರಕೃತಯೇ ನಮಃ ॥
ಸರ್ವೇಂದ್ರಿಯಗುಣದ್ರಷ್ಟ್ರೇ ಸರ್ವಪ್ರತ್ಯಯಹೇತವೇ ।
ಅಸತಾಚ್ಛಾಯಯಾಕ್ತಾಯ ಸದಾಭಾಸಾಯ ತೇ ನಮಃ ॥
ನಮೋ ನಮಸ್ತೇಖಿಲಕಾರಣಾಯ ನಿಷ್ಕಾರಣಾಯಾದ್ಭುತಕಾರಣಾಯ ।
ಸರ್ವಾಗಮಾಮ್ನಾಯ ಮಹಾರ್ಣವಾಯ ನಮೋಪವರ್ಗಾಯ ಪರಾಯಣಾಯ ॥
ಗುಣಾರಣಿಚ್ಛನ್ನಚಿದುಷ್ಮಪಾಯ ತತ್ಕ್ಷೋಭವಿಸ್ಫೂರ್ಜಿತಮಾನಸಾಯ ।

ನೈಷ್ಕರ್ಮ್ಯಭಾವ್ಯೇನ ನಿವರ್ತಿತಾಗಮ ಸ್ವಯಂಪ್ರಕಾಶಾಯ ನಮಸ್ಕರೋಮಿ ॥
ಮಾದೃಕ್ಪ್ರಪನ್ನ ಪಶುಪಾಶವಿಮೋಕ್ಷಣಾಯ
ಮುಕ್ತಾಯ ಭೂರಿಕರುಣಾಯ ನಮೋಲಯಾಯ ॥
ಸ್ವಾಂಶೇನ ಸರ್ವತನುಭೃನ್ಮನಸಿ ಪ್ರತೀತ ಪ್ರತ್ಯಗ್ದೃಶೇ ಭಗವತೇ ಬೃಹತೇ ನಮಸ್ತೇ ॥
ಆತ್ಮಾತ್ಮಜಾಪ್ತಗೃಹವಿತ್ತಜನೇಷು ಸಕ್ತೈರ್ದುಷ್ಪ್ರಾಪಣಾಯ ಗುಣಸಂಗವಿವರ್ಜಿತಾಯ ।
ಮುಕ್ತಾತ್ಮಭಿಃ ಸ್ವಹೃದಯೇ ಪರಿಭಾವಿತಾಯ
ಜ್ಞಾನಾತ್ಮನೇ ಭಗವತೇ ನಮ ಈಶ್ವರಾಯ ॥
ಯಂ ಧರ್ಮಕಾಮಾರ್ಥವಿಮುಕ್ತಿಕಾಮಾ ಭಜಂತ ಇಷ್ಟಾಂಗತಿಮಾಪ್ನುವಂತಿ ।
ಕಿಂ ಚಾಶಿಷೋರಾತ್ಯಪಿ ದೇಹಮವ್ಯಯಂ ಕರೋತು ಮೇದಭ್ರದಯೋ ವಿಮೋಕ್ಷಣಮ್ ॥
ಏಕಾಂತಿನೋ ಯಸ್ಯ ನ ಕಂಚನಾರ್ಥಂ ವಾಂಛಂತಿ ಯೇ ವೈ ಭಗವತ್ಪ್ರಪನ್ನಾಃ ।
ಅತ್ಯದ್ಭುತಂ ತಚ್ಚರಿತಂ ಸುಮಂಗಲಂ ಗಾಯಂತ ಆನಂದಸಮುದ್ರಮಗ್ನಾಃ ॥
ತಮಕ್ಷರಂ ಬ್ರಹ್ಮ ಪರಂ ಪರೇಶಮವ್ಯಕ್ತಮಾಧ್ಯಾತ್ಮಿಕಯೋಗ ಗಮ್ಯಮ್ ।
ಅತೀಂದ್ರಿಯಂ ಸೂಕ್ಷ್ಮಮಿವಾತಿದೂರಮನಂತಮಾದ್ಯಂ ಪರಿಪೂರ್ಣಮೀಡೇ ॥
ಯಸ್ಯ ಬ್ರಹ್ಮಾದಯೋ ದೇವಾ ವೇದಾ ಲೋಕಾಶ್ಚರಾಚರಾಃ ।
ನಾಮರೂಪವಿಭೇದೇನ ಫಲ್ಗ್ವ್ಯಾ ಚ ಕಲಯಾ ಕೃತಾಃ ॥
ಯಥಾರ್ಚಿಷೋಗ್ನೇಃ ಸವಿತುರ್ಗಭಸ್ತಯೋ ನಿರ್ಯಾಂತಿ ಸಂಯಾತ್ಯಸಕೃತ್ಸ್ವರೋಚಿಷಃ।
ತಥಾ ಯತೋಯಂ ಗುಣಸಂಪ್ರವಾಹೋ ಬುದ್ಧಿರ್ಮನಃ ಖಾನಿ ಶರೀರವರ್ಗಾಃ ॥
ಸ ವೈ ನ ದೇವಾಸುರಮರ್ತ್ಯತಿರ್ಯಙ್ನ ಸ್ತ್ರೀ ನ ಷಂಡೋ ನ ಪುಮಾನ್ನ ಜಂತುಃ ।
ನಾಯಂ ಗುಣಃ ಕರ್ಮ ನ ಸನ್ನ ಚಾಸನ್ನಿಷೇಧಶೇಷೋ ಜಯತಾದಶೇಷಃ ॥
ಜಿಜೀವಿಷೇ ನಾಹಮಿಹಾಮುಯಾ ಕಿಮಂತರ್ಬಹಿಶ್ಚಾವೃತಯೇಭಯೋನ್ಯಾ ।
ಇಚ್ಛಾಮಿ ಕಾಲೇನ ನ ಯಸ್ಯ ವಿಪ್ಲವಸ್ತಸ್ಯಾತ್ಮಲೋಕಾವರಣಸ್ಯ ಮೋಕ್ಷಣಮ್ ॥
ಸೋಹಂ ವಿಶ್ವಸೃಜಂ ವಿಶ್ವಮವಿಶ್ವಂ ವಿಶ್ವವೇಧಸಮ್ ।
ವಿಶ್ವಾತ್ಮಾನಮಜಂ ಬ್ರಹ್ಮ ಪ್ರಣತೋಸ್ಮಿ ಪರಂ ಪದಮ್ ॥

ಯೋಗರಂಧಿತಕರ್ಮಾಣೋ ಹೃದಿಯೋಗವಿಭಾವಿತೇ ।

ಯೋಗಿನೋ ಯಂ ಪ್ರಪಶ್ಯಂತಿ ಯೋಗೀಶಂ ತಂ ನತೋಽಸ್ಮ್ಯಹಮ್ ॥

ನಮೋ ನಮಸ್ತುಭ್ಯಮಸಹ್ಯವೇಗ ಶಕ್ತಿತ್ರಯಾಯಾಖಿಲಧೀಗುಣಾಯ ।

ಪ್ರಪನ್ನಪಾಲಾಯ ದುರಂತಶಕ್ತಯೇ ಕದಿಂದ್ರಿಯಾಣಾಮನವಾಪ್ಯವರ್ತ್ಮನೇ ॥

ನಾಯಂ ವೇದ ಸ್ವಮಾತ್ಮಾನಂ ಯಚ್ಛಕ್ತ್ಯಾಹಂ ಧಿಯಾಹತಃ ।

ತಂ ದುರತ್ಯಯಮಾಹಾತ್ಮ್ಯಂ ಭಗವಂತಂ ಇತೋಽಸ್ಮ್ಯಹಮ್ ॥

ಮೊಸಳೆಯ ಹಿಡಿತದಿಂದ ಗಜೇಂದ್ರ ಎಂಬ ಆನೆಯನ್ನು ರಕ್ಷಿಸಲು ಸಾಕ್ಷಾತ್ ಶ್ರೀಮನ್ನಾರಾಯಣ ಸ್ವಾಮಿಯು ಧರೆಗೆ ಇಳಿದು ಬಂದ ಸನ್ನಿವೇಶ. ಗಜೇಂದ್ರ ಮೋಕ್ಷದಲ್ಲಿರುವ ಮದಗಜ ಮಾನವನಿಗೂ, ಸರೋವರ ಪ್ರಾಪಂಚಿಕ ಸುಖ ಭೋಗಗಳಿಗೂ, ಮೊಸಳೆ ಸಂಸಾರ ಬಂಧನೆಗಳಿಗೂ ಪ್ರತೀಕವಾಗಿರುವ, ಅದ್ವಿತೀಯ ಆಧ್ಯಾತ್ಮಿಕ ಸಂದೇಶ ಇರುವ ಲೋಕೋತ್ತರವಾದ ಘಟ್ಟ. ಪಾಪ ಮತ್ತು ಸಂಸಾರ ಬಂಧನಗಳಿಗೆ ಪ್ರತೀಕವಾಗಿರುವ ಆಕ್ರಮಣ ಪ್ರವೃತ್ತಿಯ ಮೊಸಳೆಯು ಶಾಂತ ಸ್ವರೂಪಿಯಾಗಿ ಕ್ಷೇತ್ರದ ರಕ್ಷಕನಾಗಿರುವ ದಿವ್ಯಧಾಮ ಅನಂತಪುರ.

ರಕ್ಷಕರೇ ಭಕ್ಷಕರಾಗಿರುವ ಈಗಿನ ಜಗತ್ತಿನಲ್ಲಿ ಭಕ್ಷಕನು ರಕ್ಷಕನಾಗಿರುವ ವಿಭಿನ್ನ ತಾಣ. ಮಾಂಸಾಹಾರವನ್ನು ಸೇವಿಸುವ ತನ್ನ ಸಹಜ ಗುಣವನ್ನು ತ್ಯಜಿಸಿ, ಸಸ್ಯಾಹಾರಿಯಾಗಿರುವ ಅಪೂರ್ವ ಮೊಸಳೆ ಇರುವ ವಿಶಿಷ್ಟ ತಾಣ ಅನಂತಪುರ.

ಅದ್ಭುತವಾದ ಅನಂತ ಭಾವನೆಯ ಚಿಲುಮೆ ಅನಂತಪುರ.

ಆದಿ ಅಂತ್ಯಗಳಿಲ್ಲದ ಪರಮಾತ್ಮ ಅನಂತಪದ್ಮನಾಭನ ಮೂಲ ಸ್ಥಾನ ಎಂದೇ ಪ್ರಸಿದ್ಧಿಯಾಗಿರುವ ಕ್ಷೇತ್ರ ಅನಂತಪುರ.

ಸ್ಥಿರವಾದ ಭಾವರೂಪವುಳ್ಳ ಪರಮ ಚೇತನ ನೆಲೆಸಿರುವ ದಿವ್ಯ ತಾಣ. ಕಾಲಗರ್ಭದಲ್ಲಿ ಅಡಕವಾಗಿರುವ ರಹಸ್ಯಗಳ ಜೀವಂತ ನಿದರ್ಶನ. ಆಶ್ಚರ್ಯಕರ ಘಟನೆಗಳ ಉದಾತ್ತ ಉದಾಹರಣೆ. ಅಗಸ್ತ್ಯರು, ಬಿಲ್ವ ಮಹಾಮುನಿಗಳು ಮುಂತಾದ ಯತಿಶ್ರೇಷ್ಠರು ತಮ್ಮ ತಪೋಬಲದ

ವರ್ಚಸ್ಸಿನಿಂದ ದೈವಿಕ ಚೈತನ್ಯ ಜಾಗೃತಿಗೊಳಿಸಿರುವ ಹಿರಿಮೆಯ ವಾತಾವರಣ. ಗತಕಾಲದ ಸಾಂಸ್ಕೃತಿಕ ಬೆಳವಣಿಗೆಗಳ ಮಹಾಕ್ಷೇತ್ರವೆಂದು ಪುಷ್ಟೀಕರಿಸುವ ಸರ್ಪಕಟ್ಟು ಆವರಣ ಮತ್ತು ತಿರುವನಂತಪುರದ ತನಕ ಹೋಗುವ ರಹಸ್ಯ ಸುರಂಗ ಗುಹೆಯ ಆದಿಮೂಲ. ಉನ್ನತವಾದ ವೈಷ್ಣವೀ ಚೈತನ್ಯದಾಯಕವಾದ ಅಪೂರ್ವ ಪುಣ್ಯಕ್ಷೇತ್ರ. ಕಡುಶರ್ಕರ ಪಾಕದ ವಿಗ್ರಹಗಳನ್ನೊಳಗೊಂಡು, ಬಹುಬೇರ ಪೂಜಾ ವಿಧಿ ವಿಧಾನಗಳನ್ನು ಆಚರಿಸುವ ವಿಭಿನ್ನ ಸಂಪ್ರದಾಯ. ಕಡುಶರ್ಕರ ಪಾಕದ ವಿಗ್ರಹಗಳ ಅಂತ್ಯ ಲೇಪವಾದ ಕನಕ ರಜತ ಮಿಶ್ರಣಗಳ ದ್ರವ್ಯವನ್ನು ಅಪೂರ್ವ ಪದ್ಧತಿಯ ಬಿಂಬ ರಚನೆಯ ಶಿಲ್ಪಿಗಳಿಗೆ ಅನುಗ್ರಹ ಆಶೀರ್ವಾದಗಳೊಂದಿಗೆ ನೀಡಿದ ಶೃಂಗೇರಿಯ ಜಗದ್ಗುರುಗಳಾದ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ವಿರಚಿತ ಗರುಡಗಮನ ಕೃತಿ.

ಗರುಡ ಗಮನ ತವ ಚರಣಕಮಲಮಿಹ ಮನಸಿ ಲಸತು ಮಮ ನಿತ್ಯಂ |
ಮಮ ತಾಪಮಪಾಕುರು ದೇವ, ಮಮ ಪಾಪಮಪಾಕುರು ದೇವ ||
ಜಲಜನಯನ ವಿಧಿನಮುಚಿಹರಣಮುಖ ವಿಬುಧವಿನುತಪದಪದ್ಮ |
ಮಮ ತಾಪಮಪಾಕುರು ದೇವ, ಮಮ ಪಾಪಮಪಾಕುರು ದೇವ || ೧ ||
ಭುಜಗಶಯನ ಭವ ಮದನಜನಕ ಮಮ ಜನನಮರಣಭಯಹಾರಿ |
ಮಮ ತಾಪಮಪಾಕುರು ದೇವ, ಮಮ ಪಾಪಮಪಾಕುರು ದೇವ || ೨ ||
ಶಂಖಚಕ್ರಧರ ದುಷ್ಟದೈತ್ಯಹರ ಸರ್ವಲೋಕಶರಣ |
ಮಮ ತಾಪಮಪಾಕುರು ದೇವ, ಮಮ ಪಾಪಮಪಾಕುರು ದೇವ || ೩ ||
ಅಗಣಿತಗುಣಗಣ ಅಶರಣಶರಣದ ವಿದಳಿತಸುರರಿಪುಜಾಲ |
ಮಮ ತಾಪಮಪಾಕುರು ದೇವ, ಮಮ ಪಾಪಮಪಾಕುರು ದೇವ || ೪ ||
ಭಕ್ತವರ್ಯಮಿಹ ಭೂರಿಕರುಣಯಾ ಪಾಹಿ ಭಾರತೀತೀರ್ಥಂ |
ಮಮ ತಾಪಮಪಾಕುರು ದೇವ, ಮಮ ಪಾಪಮಪಾಕುರು ದೇವ || ೫ ||

ಇತಿ ಜಗದ್ಗುರು ಶ್ರೀಭಾರತೀತೀರ್ಥಸ್ವಾಮಿನಾ ವಿರಚಿತಂ ಶ್ರೀಮಹಾವಿಷ್ಣು ಸ್ತೋತ್ರಮ್||

ಎಲ್ಲ ದೆಸೆಗಳಲ್ಲೂ ಹರಡಿ ನಿಂತಿರುವ ಸಣ್ಣ ಸಣ್ಣ ಪರ್ವತಗಳು ತಮ್ಮ ಮಡಿಲಿನಲ್ಲಿ ಜೋಪಾನ ಮಾಡಿದಂತಿರುವ ವಿಶಾಲ ಮೈದಾನ. ಕೆಂಪು ಕಲ್ಲಿನ ಸರ್ಪಕಟ್ಟು ಶೈಲಿಯ ಸುದೀರ್ಘವಾದ ವಿಶೇಷ ರಚನೆ ಇರುವ ಮಹಾದ್ವಾರ.




ಸರ್ಪಕಟ್ಟು ಆವರಣದಿಂದ ದೇವಾಲಯವು ಬಹಳ ಆಳದಲ್ಲಿರುವಂತಿರುವ ವಿನೂತನ ಅನುಭವದೊಂದಿಗೆ ಮುನ್ನಡೆದರೆ ಅಲ್ಲಲ್ಲಿ ಕಟ್ಟಡಗಳನ್ನೊಳಗೊಂಡ ಪ್ರಕೃತಿದತ್ತವಾದ ಪ್ರದಕ್ಷಿಣಾ ಪಥ. ಶ್ರೀ ಮಹಾಗಣಪತಿ, ಶ್ರೀ ವೇದಾವತಿ, ಶ್ರೀ ಮಹಿಷಮರ್ದಿನಿ, ಶ್ರೀ ಗೋಶಾಲೆ ಕೃಷ್ಣ, ಶ್ರೀ ವನಶಾಸ್ತಾರ, ಶ್ರೀ ಜಲದುರ್ಗೆ, ಉಳ್ಳಾರುಳು, ಬೊಬ್ಬರ್ಯ ಮುಂತಾದ ಉಪಸಾನ್ನಿಧ್ಯಗಳನ್ನೊಳಗೊಂಡ ಮಹಾಕ್ಷೇತ್ರ ಅನಂತಪುರ. ಅನಂತಪದ್ಮನಾಭಸ್ವಾಮಿ ದೇವಾಲಯದ ನಿರ್ಮಾಣಕ್ಕೆ ಮೊದಲಿನಿಂದಲೂ ಬಿಲ್ವ ಮಹಾಮುನಿಗಳಿಂದ ಸೇವಿಸಲ್ಪಟ್ಟು, ಪೂಜಿಸಲ್ಪಟ್ಟ ಕಪ್ಪು ಶಿಲೆಯ ಸುಂದರ ಗೋಶಾಲೆ ಕ್ರಿಷ್ಣ. ದನಗಳನ್ನು ಹಟ್ಟಿಯಿಂದ ಮೇಯಲು ಅಟ್ಟುವ ಸ್ಥಿತಿಯಲ್ಲಿರುವ ಸರ್ವಾಭೀಷ್ಟದಾಯಕ ಮಂಗಳ ಮೂರ್ತಿ.

ಪಿಳ್ಳಂಗೋವಿಯ ಚೆಲುವ ಕೃಷ್ಣನ ಎಲ್ಲಿ ನೋಡಿದಿರಿ ರಂಗನ ಎಲ್ಲಿ ನೋಡಿದಿರಿ
ಎಲ್ಲಿ ನೋಡಿದರಲ್ಲಿ ತನಿಲ್ಲ ದಿಲ್ಲವೆಂದು ಬಲ್ಲ ಜಾಣರು ||
ನಂದಗೋಪನ ಮಂದಿರಗಳ ಸಂದುಗೊಂದಿನಲಿ
ಚಂದ ಚಂದದ ಗೋಪ ಬಾಲರ ವೃಂದ ವೃಂದದಲಿ
ಸುಂದರಾಂಗದ ಸುಂದರೀಯರ ಹಿಂದು ಮುಂದಿನಲಿ

ಅಂದದಾಕಳ ಕಂದ ಕರುಗಳ ಮಂದೆ ಮಂದೆಯಲಿ ||
ಶ್ರೀ ಗುರುಕ್ತ ಸದಾ ಸುಮಂಗಳ ಯೋಗ ಯೋಗದಲಿ
ಅಗಮಾರ್ಥದೊಳಗೆ ಮಾಡುವ ಯಾಗ ಯಾಗದಲಿ
ಶ್ರೀಗೆ ಭಾಗ್ಯನಾಗಿ ವರ್ತಿಪ ಭೋಗ ಭೋಗದಲಿ
ಭಾಗವತರು ಸದಾ ಬಾಗಿ ಪಡುವ ರಾಗ ರಾಗದಲಿ ||
ಈ ಚರಾಚರದೊಳಗೆ ಜನಂಗಳ ಆಚೆ ಈಚೆಯಲಿ
ಕೆಚರೇಂದ್ರನ ಸುತನ ರಥದ ಚೌಕ ಪೀಠದಲಿ
ನಾಚದೆ ಮಾಧವ ಎಂಬ ಭಕ್ತರ ವಾಚಕಂಗಳಲಿ
ವೀಚುಕೊಂಡದ ಪುರಂದರ ವಿಠಲನ ಲೋಚನಾಗ್ರದಲಿ ||

ಆರೋಗ್ಯಕ್ಕೆ ಬಹಳ ಯೋಗ್ಯವಾದ ಕೆರೆಯ ತೀರ್ಥವು, ರೋಗ ನಿವಾರಕ ಔಷಧಿಗಳಿಂದ ಮಾಡಲ್ಪಟ್ಟ ವಿಗ್ರಹದ ಸನ್ನಿಧಾನ ರೋಗಶಮನಿಯಾಗಿದೆಯೆಂಬುದು ಅನುಭವಸ್ತರ ಅಭಿಮತ. ನಂತರ ತಲೆ ಎತ್ತಿ ನಿಂತಿರುವ ಬಲಿಗಲ್ಲು ಎಂಬ ಪುರಾತನ ರಚನೆ. ಬಲಿಗಲ್ಲನ್ನು ದಾಟಿದರೆ ಪಾತಾಳಕ್ಕೆ ಇಳಿಯ ಬೇಕೆಂಬ ಸೂಚನೆಯೋ ಎಂಬಂತೆ ಇರುವ ಮೆಟ್ಟಿಲುಗಳು. ಮೆಟ್ಟಿಲು ಇಳಿದ ತಕ್ಷಣ ಸುತ್ತಲೂ ಕಪ್ಪಗಿನ ಕಲ್ಲುಗಳ ಮಧ್ಯೆ ಇರುವ ಹಸಿರು ಹಸಿರಾದ ಸರೋವರ. ಜಲರಾಶಿಯ ಮಧ್ಯದಲ್ಲಿ ವಿರಾಜಮಾನವಾದ ನಮಸ್ಕಾರ ಮಂಟಪ ಮತ್ತು ಗೋಪುರಗಳನ್ನೊಳಗೊಂಡ ದೇಗುಲದ ದರ್ಶನ. ನಯವಾದ ಚಂದವಾದ ಕಪ್ಪು ಶಿಲೆಗಳ ಸ್ತಂಭಗಳಾಧಾರಿತ ಮಂಟಪ. ಶ್ರೀಕ್ಷೇತ್ರದ ಚರಿತ್ರೆಯನ್ನು ಅರ್ಥೈಸಿಕೊಳ್ಳಬಹುದಾದ ನಾಜೂಕಾದ ಕೆತ್ತನೆ ಕೆಲಸಗಳನ್ನು ಆಸ್ವಾದಿಸುತ್ತಾ ಮುನ್ನಡೆದರೆ ಗರ್ಭಗುಡಿಗೆ ಪ್ರವೇಶಿಸುವ ಪ್ರಧಾನ ದ್ವಾರ. ದ್ವಾರದ ಇಕ್ಕೆಡೆಗಳಲ್ಲಿ ಒಡೆಯನನ್ನು ಶಿರಸಾವಹಿಸುತ್ತಿರುವ ಜಯವಿಜಯರು.

ಗರ್ಭಗುಡಿಯಲ್ಲಿ ಅಭೂತಪೂರ್ವವಾದ ಶಿಲ್ಪಕಲಾ ವೈಭವದೊಂದಿಗೆ ಪಾವನವಾದ, ಪುಣ್ಯಪ್ರದವಾದ ಶ್ರೀ ಅನಂತ ಪದ್ಮನಾಭ ಸ್ವಾಮಿಯ ದಿವ್ಯದರ್ಶನ.

ಶ್ರೀಮನ್ನಾರಾಯಣನು ಶ್ರೀ ಅನಂತ ಪದ್ಮನಾಭನಾಗಿ ಇಕ್ಕೆಡಗಳಲ್ಲಿ ಶ್ರೀದೇವಿ, ಭೂದೇವಿ, ಗರುತ್ಮಂತ, ಹನುಮಂತ ಹಾಗೂ ನಾಗಕನ್ನಿಕೆಯರನ್ನೊಡಗೂಡಿಕೊಂಡು ಐದು ಹೆಡೆಯ ಸರ್ಪದ ಮೇಲೆ ಆಸೀನನಾಗಿರುವ ವಿಶೇಷ ಭಂಗಿ.



ಮೃತ್ತಿಕೆಯಿಂದ ನರ ನಾಡಿ, ಅಸ್ಥಿಗಳನ್ನು ಸಂಕಲ್ಪಿಸಿ ವಿಶೇಷ ರೀತಿಯಲ್ಲಿ ನುರಿತ ಶಿಲ್ಪಿಗಳಿಂದ ಮಾಡಲ್ಪಟ್ಟ ಅಪುರೂಪದ ವಿಗ್ರಹಗಳು. ರಚನೆಯಲ್ಲಿ ಕ್ಲಿಷ್ಟಕರ ವಿಧಾನವಾದ ವೈಶಿಷ್ಟ್ಯಪೂರ್ಣ ಕಡುಶರ್ಕರ ಪಾಕದ ವಿಗ್ರಹಗಳು. ಮೃತ್ತಿಕೆಯಿಂದ ಅಸ್ಥಿಯನ್ನು ಸಂಕಲ್ಪ ಮಾಡಿ ಜೀವಂತಿಕೆ ನೀಡಿದ ಪ್ರತಿಮೆಗಳಲ್ಲಿ ಅತ್ಯದ್ಭುತ ಶಕ್ತಿ ಇರುತ್ತದೆಂಬ ಅನಾದಿಕಾಲದ ನಂಬಿಕೆಯನ್ನು ಪುಷ್ಟಿಗೊಳಿಸುತ್ತಿರುವ ಮಂಗಳಮಯ ರೂಪ. ಇಂದ್ರಿಯಗಳ ಹಿಡಿತಕ್ಕೆ ಸಿಕ್ಕದಿರುವ ಲೋಕಾತೀತ ತತ್ತ್ವದ ಸ್ವರೂಪವನ್ನು, ಜಗದ್ರಹಸ್ಯವನ್ನು, ಜೀವೇಶ್ವರ ವಿವೇಕವನ್ನು, ಪರಮ ಸತ್ಯವನ್ನು ತಿಳಿಸಿಕೊಡುವ ವೇದದ ನಾರಾಯಣ ಸೂಕ್ತ.

ಓಂ ಸ॒ಹ ನಾ᳚ವವತು । ಸ॒ಹ ನೌ᳚ ಭುನಕ್ತು । ಸ॒ಹ ವೀ॒ರ್ಯಂ᳚ ಕರವಾವಹೈ ।

ತೇ॒ಜ॒ಸ್ವಿನಾ॒ವಧೀ᳚ತಮಸ್ತು ಮಾ ವಿ᳚ದ್ವಿಷಾ॒ವಹೈ॥

ಓಂ ಶಾಂತಿ॒ಃ ಶಾಂತಿ॒ಃ ಶಾಂತಿ᳚ಃ ॥

ಓಮ್ ॥ ಸ॒ಹ॒ಸ್ರ॒ಶೀರ್॑ಷಂ ದೇ॒ವಂ॒ ವಿ॒ಶ್ವಾಕ್ಷ॑ಂ-ವಿಶ್ವಶ॑ಂಭುವಮ್ ।
ವಿಶ್ವ॑ಂ ನಾ॒ರಾಯ॑ಣಂ ದೇ॒ವ॒ಮ॒ಕ್ಷರ॑ಂ ಪರ॒ಮಂ ಪದಮ್ ।
ವಿ॒ಶ್ವತ॒ಃ ಪರ॑ಮಾನ್ನಿ॒ತ್ಯಂ॒-ವಿಶ್ವಂ ನಾ॑ರಾಯ॒ಣಗ್ಂ ಹ॑ರಿಮ್ ।
ವಿಶ್ವ॑ಮೇ॒ವೇದಂ ಪುರು॑ಷ॒-ಸ್ತದ್ವಿ॒ಶ್ವ-ಮುಪ॑ಜೀವತಿ ।
ಪತಿ॑ಂ॒-ವಿಶ್ವ॑ಸ್ಯಾ॒ತ್ಮೇಶ್ವ॑ರ॒ಗ್ಂ॒ ಶಾಶ್ವ॑ತಗ್ಂ ಶಿ॒ವ-ಮ॑ಚ್ಯುತಮ್ ।
ನಾ॒ರಾಯ॒ಣಂ ಮ॑ಹಾಜ್ಞೇ॒ಯಂ॒-ವಿ॒ಶ್ವಾತ್ಮಾ॑ನಂ ಪ॒ರಾಯ॑ಣಮ್ ।
ನಾ॒ರಾಯ॒ಣಪ॑ರೋ ಜ್ಯೋ॒ತಿ॒ರಾ॒ತ್ಮಾ ನಾ॑ರಾಯ॒ಣಃ ಪ॑ರಃ ।
ನಾ॒ರಾಯ॒ಣಪರ॑ಂ ಬ್ರ॒ಹ್ಮ॒ ತ॒ತ್ತ್ವ॒ಂ ನಾ॑ರಾಯ॒ಣಃ ಪ॑ರಃ ।
ನಾ॒ರಾಯ॒ಣಪ॑ರೋ ಧ್ಯಾ॒ತಾ॒ ಧ್ಯಾ॒ನಂ ನಾ॑ರಾಯ॒ಣಃ ಪ॑ರಃ ।
ಯಚ್ಚ॑ ಕಿಂ॒ಚಿಜ್ಜಗತ್ಸ॒ರ್ವಂ॒ ದೃ॒ಶ್ಯತೇ॑ ಶ್ರೂ॒ಯ॒ತೇಽಪಿ॑ ವಾ ॥
ಅಂತ॑ರ್ಬ॒ಹಿಶ್ಚ॑ ತತ್ಸ॒ರ್ವಂ॒-ವ್ಯಾ॒ಪ್ಯ ನಾ॑ರಾಯ॒ಣಃ ಸ್ಥಿ॑ತಃ ।
ಅನ॑ನ್ತ॒ಮವ್ಯ॑ಯಂ ಕ॒ವಿಗ್ಂ ಸ॑ಮು॒ದ್ರೇಽಂತ॑ಂ-ವಿ॒ಶ್ವಶ॑ಂಭುವಮ್ ।
ಪ॒ದ್ಮ॒ಕೋ॒ಶ-ಪ್ರ॑ತೀಕಾ॒ಶ॒ಗ್ಂ॒ ಹೃ॒ದಯ॑ಂ ಚಾಪ್ಯ॒ಧೋಮು॑ಖಮ್ ।
ಅಧೋ॑ ನಿ॒ಷ್ಟ್ಯಾ ವಿ॑ತಸ್ಯಾ॒ಂತೇ॒ ನಾ॒ಭ್ಯಾಮು॑ಪರಿ॒ ತಿಷ್ಠ॑ತಿ ।
ಜ್ವಾ॒ಲ॒ಮಾ॒ಲಾಕು॑ಲಂ ಭಾ॒ತೀ॒ ವಿ॒ಶ್ವಸ್ಯಾ॑ಯತ॒ನಂ ಮ॑ಹತ್ ।
ಸಂತ॑ತಗ್ಂ ಶಿ॒ಲಾಭಿ॑ಸ್ತು॒ ಲಂಬ॑ತ್ಯಾಕೋಶ॒ಸನ್ನಿ॑ಭಮ್ ।
ತಸ್ಯಾ॑ಂತೇ॑ ಸುಷಿ॒ರಗ್ಂ ಸೂ॒ಕ್ಷ್ಮಂ ತಸ್ಮಿ॑ನ್ ಸ॒ರ್ವಂ ಪ್ರತಿ॑ಷ್ಠಿತಮ್ ।
ತಸ್ಯ॒ ಮಧ್ಯೇ॑ ಮ॒ಹಾನ॑ಗ್ನಿ-ರ್ವಿ॒ಶ್ವಾರ್ಚಿ॑-ರ್ವಿ॒ಶ್ವತೋ॑ಮುಖಃ ।
ಸೋಽಗ್ರ॑ಭು॒ಗ್ವಿಭ॑ಜಂತಿ॒ಷ್ಠ॒-ನ್ನಾಹಾ॑ರಮಜ॒ರಃ ಕ॒ವಿಃ ।
ತಿ॒ರ್ಯ॒ಗೂ॒ರ್ಧ್ವಮ॑ಧಶ್ಶಾ॒ಯೀ॒ ರ॒ಶ್ಮಯ॑ಸ್ತಸ್ಯ॒ ಸಂತ॑ತಾ ।
ಸ॒ಂತಾ॒ಪಯ॑ತಿ ಸ್ವಂ ದೇ॒ಹಮಾಪಾ॑ದತಲ॒ಮಸ್ತ॑ಕಃ ।
ತಸ್ಯ॒ ಮಧ್ಯೇ॒ ವಹ್ನಿ॑ಶಿಖಾ ಅ॒ಣೀಯೋ॑ರ್ಧ್ವಾ ವ್ಯ॒ವಸ್ಥಿ॑ತಃ ।
ನೀ॒ಲತೋ॑-ಯದ॑ಮಧ್ಯಸ್ಥಾ॒-ದ್ವಿ॒ದ್ಯುಲ್ಲೇ॑ಖೇವ॒ ಭಾಸ್ವ॑ರಾ ।
ನೀ॒ವಾ॒ರ॒ಶೂಕ॑ವತ್ತ॒ನ್ವೀ॒ ಪೀ॒ತಾ ಭಾಸ್ವ॑ತ್ಯಣೂಪ॑ಮಾ ।

ತಸ್ಯಾಃ ಶಿಖಾಯಾ ಮಧ್ಯೇ ಪರಮಾತ್ಮಾ ವ್ಯವಸ್ಥಿತಃ ।
ಸ ಬ್ರಹ್ಮ ಸ ಶಿವಃ ಸ ಹರಿಃ ಸೇಂದ್ರಃ ಸೋಽಕ್ಷರಃ ಪರಮಃ ಸ್ವರಾಟ್ ॥
ಋತಗ್ಂ ಸತ್ಯಂ ಪರಂ ಬ್ರಹ್ಮ ಪುರುಷಂ ಕೃಷ್ಣಪಿಂಗಲಮ್ ।
ಊರ್ಧ್ವರೇತಂ-ವಿರೂಪಾಕ್ಷಂ-ವಿಶ್ವರೂಪಾಯ ವೈ ನಮೋ ನಮಃ ॥
ಓಂ ನಾರಾಯಣಾಯ ವಿದ್ಮಹೇ ವಾಸುದೇವಾಯ ಧೀಮಹಿ ।
ತನ್ನೋ ವಿಷ್ಣುಃ ಪ್ರಚೋದಯಾತ್ ॥
ಓಂ ಶಾಂತಿಃ ಶಾಂತಿಃ ಶಾಂತಿಃ ॥

ಶ್ರೇಷ್ಟವಾದ ಆದಿಶೇಷನ ಸಿಂಹಾಸನದಲ್ಲಿ ಶಂಖ ಚಕ್ರಗಳನ್ನು ಧರಿಸಿ, ಅಭಯ ವರದ ಮುದ್ರಗಳೊಂದಿಗೆ ಗರುತ್ಮಂತನಿಂದ, ಹನುಮಂತನಿಂದ ಸೇವಿಸಲ್ಪಡುತ್ತಿರುವ ಶ್ರೀದೇವಿ ಭೂದೇವಿ ಸಹಿತನಾಗಿರುವ ಶ್ರೀ ಮಹಾವಿಷ್ಣುವಿನ ನಿಜ ಸ್ವರೂಪ.

ದಿಕ್ಕುಗಳನ್ನೂ, ಪಾತಾಳವನ್ನೂ, ಭೂರ್ಭುವಾದಿ ಲೋಕಗಳನ್ನೂ ಬ್ರಹ್ಮರೂಪದಿಂದ ಸೃಷ್ಟಿ ಮಾಡುತ್ತಲೂ, ವಿಷ್ಣುರೂಪದಿಂದ ಪೋಷಿಸುತ್ತಲೂ, ರುದ್ರರೂಪದಿಂದ ನಾಶಮಾಡುತ್ತಲೂ ಇರುವ ತ್ರಿಮೂರ್ತಿ ಸ್ವರೂಪನಾದ ಅನಂತ.

ಜಗತ್ತಿಗೆ ಮೂಲಕಾರಣವಾದ, ಅಖಿಲ ಲೋಕಗಳಿಗೆ ಪ್ರಭುವಾದ ಭಗವತ್ಸ್ವರೂಪ.

ಶೇಷನಾಗನ ಕವಚದ ಕೆಳಗೆ ವಿರಾಜಮಾನವಾದ ಪರಮಾತ್ಮನ ಪ್ರಕಾಶಮಾನವಾದ ನೀಲದೇಹ ಶೋಭೆ.

ಮಸ್ತಕದ ಮೇಲೆ ಕಂಗೊಳಿಸುತ್ತಿರುವ ಕಿರೀಟ, ಲಲಾಟದಲ್ಲಿ ಪ್ರಕಾಶಮಯ ಕಸ್ತೂರಿ ತಿಲಕ, ಅರಳಿದ ಕಮಲಗಳಂತಿರುವ ಪ್ರಫುಲ್ಲಿತ ನೇತ್ರಗಳು, ಕಣ್ಣಂಚಿನ ದೃಷ್ಟಿಯಿಂದ ನಮ್ಮೆಡೆ ಬೀರುತ್ತಿರುವ ಕೃಪಾಕಟಾಕ್ಷ, ನೀಳ ನಾಸಿಕ, ಮಂದಸ್ಮಿತ ವದನ, ಹಾರಗಳಿಂದ ಶೋಭಿಸುತ್ತಿರುವ ವಕ್ಷಸ್ಥಳ, ಶಂಖ, ಚಕ್ರ, ರಕ್ಷಣೆ ಮತ್ತು ಭರವಸೆಯ ಸೂಚಕವಾದ ಅಭಯಮುದ್ರೆ, ಅಭೀಷ್ಟಸಿದ್ಧಿಯ ಆಶೀರ್ವಾದ ನೀಡುತ್ತಿರುವ ವರದ ಮುದ್ರೆ ಇರುವ ನಾಲ್ಕು ತೋಳುಗಳು, ನಡುವಿನಲ್ಲಿರುವ ಒಡ್ಯಾಣ, ಬ್ರಹ್ಮರುದ್ರಾದಿಗಳಿಂದ ವಂದಿಸಲ್ಪಡುತ್ತಿರುವ ಪಾದಪಂಕಜಗಳು, ಸಂಪತ್ತು ಸಮೃದ್ಧಿಯ ದೇವತೆ ಶ್ರೀದೇವಿ ಮತ್ತು ಫಲವತ್ತತೆಯನ್ನು ಪ್ರತಿನಿಧಿಸುವ ದೇವತೆ ಭೂದೇವಿ. ಅಕ್ಕ ಪಕ್ಕದಲ್ಲಿ ಕೈಮುಗಿದು ನಿಂತಿರುವ ಹನುಮಂತ, ಗರುತ್ಮಂತರಿಗೆ ತನ್ನ ಮಂಗಳ ಜ್ಞಾನಮುದ್ರೆಯಿಂದ

ಭೋಧಿಸುತ್ತಿರುವಂಥ  ಭಂಗಿ. ಭಕ್ತರನ್ನು ಪಾರಮಾರ್ಥಿಕ ಉತ್ತುಂಗಕ್ಕೆ ಕೊಂಡೊಯ್ಯುವ ದೈವೀಕ ಅನುಭವದ ಪರಾಕಾಷ್ಟೆ. ಆತ್ಮಸಾಕ್ಷಾತ್ಕಾರದ ಅನಿರ್ವಚನೀಯ ಮಂಗಳ ಆನಂದ.

ಈಗ ಅನಂತಪದ್ಮನಾಭ ಮಂಗಳ ಸ್ತೋತ್ರ.

ಶ್ರಿಯಃಕಾಂತಾಯ ಕಳ್ಯಾಣನಿಧಯೇ ನಿಧಯೇಽರ್ಥಿನಾಮ್ |
ಶ್ರೀ ಶೇಷಶಾಯಿನೇ ಅನಂತಪದ್ಮನಾಭಾಯ ಮಂಗಳಮ್ || ೧ ||
ಸ್ಯಾನಂದೂರಪುರೀಭಾಗ್ಯಭವ್ಯರೂಪಾಯ ವಿಷ್ಣವೇ |
ಆನಂದಸಿಂಧವೇ ಅನಂತಪದ್ಮನಾಭಾಯ ಮಂಗಳಮ್ || ೨ ||
ಹೇಮಕೂಟವಿಮಾನಾಂತಃ ಭ್ರಾಜಮಾನಾಯ ಹಾರಿಣೇ |
ಹರಿಲಕ್ಷ್ಮೀಸಮೇತಾಯ ಪದ್ಮನಾಭಾಯ ಮಂಗಳಮ್ || ೩ ||
ಶ್ರೀವೈಕುಂಠವಿರಕ್ತಾಯ ಶಂಖತೀರ್ಥಾಂಬುಧೇಃ ತಟೇ |
ರಮಯಾ ರಮಮಾಣಾಯ ಪದ್ಮನಾಭಾಯ ಮಂಗಳಮ್ || ೪ ||
ಅಶೇಷ ಚಿದಚಿದ್ವಸ್ತುಶೇಷಿಣೇ ಶೇಷಶಾಯಿನೇ |
ಅಶೇಷದಾಯಿನೇ ಅನಂತಪದ್ಮನಾಭಾಯ ಮಂಗಳಮ್ || ೫ ||
ಯತ್ಪದಂ ಪರಮಂ ಸೇವ್ಯಂ ಸದಾ ಪಶ್ಯಂತಿ ಸೂರಯಃ |
ಸೇನಾಪತಿಮುಖಾಸ್ತಸ್ಮೈ ಪದ್ಮನಾಭಾಯ ಮಂಗಳಮ್ || ೬ ||
ಚುತುರ್ಮುಖೇಶ್ವರಮುಖ್ಯೈಃ ಪುತ್ರಪೌತ್ರಾದಿಶಾಲಿನೇ |
ಸಮಸ್ತಪರಿವಾರಾಯ ಪದ್ಮನಾಭಾಯ ಮಂಗಳಮ್ || ೭ ||
ದಿವಾಕರಯತೀಶಾನಯೋಗಿಹೃತ್ಪದ್ಮಭಾನವೇ |
ಪರಸ್ಮೈ ಬ್ರಹ್ಮಣೇ ಅನಂತಪದ್ಮನಾಭಾಯ ಮಂಗಳಮ್ || ೮ ||
ಪರಾಂಕುಶಪ್ರಬಂಧೋಕ್ತಿಪ್ರಥಿತಾಯ ಪರಮಾತ್ಮನೇ |
ಪೂರ್ಣಾಯ ಮಹತೇ ಅನಂತಪದ್ಮನಾಭಾಯ ಮಂಗಳಮ್ || ೯ ||
ವಂಚಿಭೂಪಶಿರೋರತ್ನರಶ್ಮಿನೀರಾಜಿತಾಂಘ್ರಯೇ |
ವಾಂಛಿತಾಖಿಲದಾಯಾಸ್ತು ಪದ್ಮನಾಭಾಯ ಮಂಗಳಮ್ || ೧೦ ||
ಸರ್ವಾವಯವಸೌಂದರ್ಯ ಸೌವರ್ಣಸುಷಮಾ ಜುಷೇ |
ಸದಾ ಸಮ್ಮೋಹನಾಯಾಸ್ತು ಪದ್ಮನಾಭಾಯ ಮಂಗಳಮ್ || ೧೧ ||

ಯೋಗೇಶ್ವರಾಯ ಕೃಷ್ಣಾಯ ನರಸಿಂಹಾಯ ಯೋಗಿನೇ |

ಯೋಗಮುದ್ರಾಭಿರಾಮಾಯ ಪದ್ಮನಾಭಾಯ ಮಂಗಳಮ್ || ೧೨ ||

ಅನಂತಪುರನಾಥಾಯ ನಿರಂತರದಯಾಮುಚೇ |

ಅನಂತಪದ್ಮನಾಭಾಯ ನಿತ್ಯಶ್ರೀಃ ನಿತ್ಯಮಂಗಳಮ್ || ೧೩ ||

ಪ್ರಾಕೃತಿಕ ರಮಣೀಯತೆಯಿಂದಲೂ ವಿಗ್ರಹ ವೈಶಿಷ್ಟ್ಯತೆಯಿಂದಲೂ ಸಹಚರ ಮೊಸಳೆಯ ಇರುವಿಕೆಯಿಂದಲೂ ಅದ್ಭುತ ಅನುಭವವನ್ನು ನೀಡುವ ಅನಂತಪುರ ಶ್ರೀ ಅನಂತಪದ್ಮನಾಭ ಸ್ವಾಮಿ ದೇವಾಲಯವು ನಮ್ಮೆಲ್ಲರ ಸುಕೃತ ಫಲ.

ಐದು ಹೆಡೆಯ ಅನಂತನ ಮೇಲೆ ವಿರಾಜಮಾನನಾಗಿರುವ ಪೂರ್ಣಚಂದ್ರ ಕಾಂತಿಯಿಂದ ಬೆಳಗುತ್ತಿರುವ ಅನಂತಪದ್ಮನಾಭ ಸ್ವಾಮಿಯು ನಮಗೆ ಮಂಗಳವನ್ನುಂಟುಮಾಡಲಿ. ನೀಲಮೇಘ ಶ್ಯಾಮ ಸುಂದರನು ನಮ್ಮ ಎಲ್ಲಾ ಆಪತ್ತುಗಳನ್ನು ಶಮನಗೊಳಿಸಲಿ. ಪರಂಧಾಮನ ಸ್ನಿಗ್ಧ ಕೃಪಾದೃಷ್ಟಿಯು ನಮ್ಮ ತಾಪತ್ರಯಗಳನ್ನು ಪರಿಹರಿಸಲಿ.

ಸರ್ವೇಜನಾ ಸುಖಿನೋ ಭವಂತು.

ಓಂ ಶಾಂತಿಃ ಶಾಂತಿಃ ಶಾಂತಿಃ.

